## ಮನದ ಭಾಷೆಯ 'ಚೆನ್ನುಡಿ'

**'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್ ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.**

ಛಂದಾಯ್ತಂತ ಮತ್ತ ಸುರೂಲಿಂದ ನಿಮ್ಮಗಳು, ನಮ್ಮಗಾ, ಹಂಗ... ಹೀಂಗಂತೆಲ್ಲ ಹೇಳಿದೆ. ಹುಡುಗಿ ತಂದಿ 'ಸ್ಸಾರಿರೀ ಮೇಡಂ. ಡಾಕ್ಟರ್ ವರ ನಮಗ ಪಸಂದಿಲ್ಲ. ಯಾಕಂದ್ರ ಅವರು ಲೈಫ್ನಾಗ ಬಾಳ ಲೇಟಾಗಿ ಸೆಟಲಾಗ್ತಾರ. ಸೆಟಲಾದ್ರುನೂ ಬಿಜಿಯಾಗ್ತಾರ. ಹೆಂಡ್ತಿ, ಮಕ್ಕಳಿಗಿ ಟೈಮ್ ಕೊಡಂಗಿಲ್ಲ. ತಪ್ಪ್ ತಿಳ್ಕೋಬ್ಯಾಡ್ರಿ.' ಅಂದ್ರು ನಮ್ಮನಿಯವರ ಮ್ಯಾಲೆ ಖಂಡಗದಷ್ಟು ಸಿಟ್ಟು ಬಂತು. ನಾನೂ ಅಪ್ಪನ ಡಾಕ್ಟರಕಿ ಸಂಭ್ರಮ ಕಂಡಿದ್ದೆ. ಮಗನಿಗೂ ಮೆಡಿಕಲ್ ಬ್ಯಾಡಂತ ಒಂದೇಸಮ ಬಡ್ಕೊಂಡೆ. ಸೀಟ್ ಸಿಕ್ಕಾಗ ಅಪ್ಪ, ಮಗ ಕುಣದ್ರೂ. ಈಗ ಎಂಥಾ ಫಜೀತಿ...

'ಮರಳಿ ಯತ್ನವ ಮಾಡು' ಅಂದು ಇನ್ನೊಂದು ನಂಬರ್ ಹಚ್ಚಿದೆ. ಎತ್ತಲೇ ಇಲ್ಲ. ಹಾಳಾಗ್ಲಿ... ಇನ್ನೊಂದಕ್ಕ ಟ್ರೈ ಮಾಡಿದೆ. ಹುಡುಗಿನೇ ಮಾತಾಡಿದ್ಲು. ಎಂಥ ಚೆಂದದ ದನಿ. 'ಹೇಳ್ರಿ ಆಂಟಿ' ಅಂದಾಗ ಹೇಳಲಿಕ್ಕೆ ಕೂತಿದ್ನಲ್ಲ... ಮತ್ತೆಲ್ಲಾ ಸುರು ಮಾಡಿದೆ. ಲಗ್ನ ಮಾಡಿಕೊಳ್ಳುವಾಕಿನೇ ಇದ್ದದ್ದಕ್ಕ ಸ್ವಲ್ಪ ಜಾಸ್ತಿನೇ ಹೇಳಿದೆ. ಆಮ್ಯಾಲ ಆಕಿ ಸಣ್ಣ ದನಿಲಿಂದ 'ಆಂಟಿ ಖರೆವಂದ್ರ ನಾ ಒಬ್ಬನ್ನ ಪ್ರೀತಿಸಲಿಕತ್ತಿನಿ. ಬ್ಯಾರೆ ಜಾತಿಯವ. ಅದಕ್ಕ ಮನ್ಯಾಗಿನ್ನೂ ಹೇಳಿಲ್ಲ. ಪ್ಲೀಸ್... ನೀವು ಹೇಳಬ್ಯಾಡ್ರಿ' ಅಂತ ಅನಬೇಕ...?

'ನಾಯಾಕ ಹೇಳತೀನ ಮಾರಾಯ್ತಿ. ಯಾರಿಗರ ಮಾಡ್ಕೋ' ಅಂತ ಫೋನಿಟ್ಟೆ. ತಲಿ ಧಿಂ ಅಂತು. ಚಹಾ ಬೇಕೇಬೇಕಂತ ಎದ್ದೆ. ತಕ್ಷಣ 'ಇವತ್ತ ಶನಿವಾರ. ಹನುಮಪ್ಪನ ವಾರ. ಹೇಳಿಕೇಳಿ ಆತ ಬ್ರಹ್ಮಚಾರಿ. ಅಂದಮ್ಯಾಲ ಲಗ್ನಕ್ಕ ಹೆಂಗ್ ಸಾತ್ ಕೊಡ್ತಾನ...' ಅವತ್ತು ಲಗ್ನದ ಪ್ರಯತ್ನನೇ ಬಿಟ್ಟೆ.

ಮರುದಿನ ನಾಕಾರು ನಂಬರಿಗೆ ಫೋನಾಯಿಸಿದ್ರ ಒಂದೂ ಹೊಂದಿಕಿ ಆಗಲಿಲ್ಲ. ಒಬ್ಬರು ಎತ್ತರ ಭಾಳಾಯ್ತು, ಇನ್ನೊಬ್ರು ವಯಸ್ಸಿನ ಅಂತರಿಲ್ಲ, ಒಬ್ಬರು ವಿವರ ಕೇಳಿ ಮಾತಾಡಿ ಹೇಳ್ತಿವಂದ್ರು. ಎಂಟಾನೆಂಟು ದಿನಾದರೂ ಉತ್ತರಿಲ್ಲ. ಅಯ್ಯೋ... ರಾಮ! ಇವತ್ತು ಅಪ್ಯಾನ ಘಾತವಾರ ಅಂತ ನೆನಪಾಯ್ತು.

ಸೋಮವಾರ ದೇವರಿಗಿ ದೀಪ ಹಚ್ಚಿ ಫೋನ್ ತೊಗೊಂಡೆ. ನಮ್ಮವರು ಆರಾಮಾಗಿ ಪೇಪರ್ ಓದುತಿದ್ದದಕ್ಕ ಸಿಟ್ಟು ಬಂತು. ಎಲ್ಲ ಜುಮ್ಮೆದಾರಿ ನನಗೆ ಯಾಕ... ಇವರಿಗೂ ಚಿಂತಿ ಬ್ಯಾಡೆನು ಅನಿಸಿತು. ಸಿಟ್ಟಿಗೆದ್ರ ಕೆಡ್ತದಂತ 'ನಂಗಂತೂ ಒಂದೂ ಹೊಂದಿಕಾಗಲಿಲ್ಲ. ನಿಮ್ಮ ಕೈಗುಣದಿಂದ ಛೋಲೊ ಸಂಬಂಧ ಕೂಡಬಹುದು' ಅಂತೆಲ್ಲ ಅಟ್ಟಕ್ಕೇರಿಸಿದೆ. ಅವರೂ 'ಹೂಂ' ಅಂತ ನನ್ನ ಫೋನಿಂದಲೇ ಒಂದ್ ನಂಬರಿಗಿ ಕಾಲ್ ಮಾಡಿ ಇಂಗ್ಲಿಷನಾಗ ಮಾತು ಸುರುಮಾಡಿದ್ರು. ಡಿಟೇಲಾಗಿ ಮಾತಾಡಿ ನಕ್ಕೋತ ಫೋನಿಟ್ರು. ನಾನು 'ಏನಂದರ್ರೀ' ಅಂದಾಗ ಧಿಮಾಕಿನಿಂದ 'ನಿಮ್ಮ ಸಂಬಂಧ ಬೆಳಸಲಿಕ್ಕಿ ನಮಗೂ ಸಂತೋಷದ. ಹುಡುಗರಿಬ್ಬರು ಒಪ್ಪಿದ್ರ ಡೇಟು ಫಿಕ್ಸ್ ಮಾಡಣಂದ್ರು.'

ನಾನು 'ಅಯ್ಯ... ವರದಕ್ಷಣಿ, ವರೋಪಚಾರ' ಅಂತನ್ನೂದ್ರಾಗ 'ಅವರೂ ಕೇಳಿದ್ರು. ನಾನು ಅದೆಲ್ಲ ಏನೂ ಬ್ಯಾಡಾ. ನಾವೂ ಹೊಸ ವಿಚಾರದವ್ರು ಅಂದೆ. ಸಂತೋಷ್‌ಪಟ್ರು. ಇಂಥ ಸಂಬಂಧ ಸಿಕ್ಕಿದಕ್ಕ ನಾವೂ ಲಕ್ಕಿ ಅಂದ್ರು.' ಅಂತ ಪೇಪರ್ನಾಗ ಮತ್ತ ಮುಖ ಇಟ್ರು. ಇವ್ರಿಗಿ ಕೈಗುಣ, ಕಾಲ್ಗುಣಂತ ಸುಮ್ಮನಂದ್ರ ಖರೇನ ಆಯ್ತಲ್ಲ. ಒಳ್ಳೆ ಸಂಬಂಧ, ಇಷ್ಟು ಸರಳ, ಅನಾಯಾಸ ಕೂಡಿ ಬರ್ತದನಿಸಿರಲಿಲ್ಲ. ಇನ್ನೇನು... ಹುಡುಗರಿಬ್ಬರೂ ನೋಡಿಬಿಟ್ರ ಠರಾವಾದಂಗೇ. ಮನಸ್ಸಿನಾಗೆ ಸಾಲುದೀವಿಗಿ ಬೆಳಗಿದ್ದೆ.

ಮಧ್ಯಾಹ್ನ ಅಡ್ಡಾದಾಗ ಫೋನ್ ಬಂತು. ಹುಡುಗಿ ತಂದಿದಿತ್ತು. ನನ್ನ ಪರಿಚಯ ಹೇಳಕೊಂಡೆ. ಪುಣ್ಯಕ್ಕ...ss ಕನ್ನಡದಾಗ ಮಾತಾಡಿದ್ರು 'ಅಂದಹಾಗೆ ನೀವು ಯಾವ ಕಡೆಯವರು' ಕೇಳಿದ್ರು.

ನಾನು 'ನಾವರ್ರೀ... ಕಲಬುರ್ಗಿಯವರು.' ಅಂದೆ. 'ಅಯ್ಯೋ ಹೌದಾ... ನಮಗೆ ಉತ್ತರ ಕರ್ನಾಟಕದವರಂತ ಗೊತ್ತಿರಲಿಲ್ಲ. ಆ ಸ್ಥಳ, ಜನ ಮಗಳಿಗೆ ಕಷ್ಟರೀ...' ಅಂದ್ರು. ನಾನು 'ನಮ್ಮದು ಉತ್ತರ ಕರ್ನಾಟಕಲ್ಲಾರಿ. ಉತ್ತರ ಕರ್ನಾಟಕಂದ್ರ ಹುಬ್ಬಳ್ಳಿ, ಧಾರವಾಡ ಕಡೆ. ನಮ್ಮದು ಕಲ್ಯಾಣ ಕರ್ನಾಟಕ. ಹಿಂದಕ್ಕss... ಹೈದರಾಬಾದ್ ನಿಜಾಮನ ಆಳ್ವಿಕಿ ನೋಡ್ರಿ. ಹಂಗಾಗಿ ಹೈದರಾಬಾದ್ ಕರ್ನಾಟಕ ಅಂತಿದ್ರು. ಯಡಿಯೂರಪ್ಪ 2019ರೊಳಗ ಕಲ್ಯಾಣ ಕರ್ನಾಟಕಂತ ನಾಮಕರಣ ಮಾಡಿದ್ರು. ಅದರಾಗಿನ ಜಿಲ್ಲಾಗಳಂದ್ರ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ, ಕಲಬುರ್ಗಿ, ಬೀದರ್ರು. ಈ ಕಲ್ಯಾಣ ಕರ್ನಾಟಕದವರು ನಾವು. ಕಲ್ಯಾಣೇನೂ ಆಗಿಲ್ಲ ಬಿಡ್ರಿ. ಹಂಗ್ ನೋಡಿದರss... ನಮ್ಮ ದೇಶಾನೂ ಸ್ವತಂತ್ರಾಗಿ ಈಸ್ ವರ್ಷಾದ್ರೂ ಇನ್ನೂ ಅತಂತ್ರದ. ನಮ್ಮದು ಹೆಸರರ ಕಲ್ಯಾಣ ಕರ್ನಾಟಕ ಆಯ್ತಲ್ಲಾss....ಅಷ್ಟss... ಖುಷಿ ನಮಗ. ಅಲ್ಪತೃಪ್ತರು ನಾವು.' ಅಂತನ್ನೂದ್ರಾಗ ಹುಡುಗಿ ತಂದಿ 'ನಮ್ಮಗಳಿಗೆ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕ ಯಾವುದು ಆಗಲ್ಲ. ಪ್ರಾಪರ್ ಬೆಂಗಳೂರಿಗರೇ ಆಗಿರಬೇಕು' ಅಂತ ಫೋನಿಟ್ಟುಬಿಟ್ರು.

ನನ್ನ ಭೌಗೋಳಿಕ, ಐತಿಹಾಸಿಕ, ರಾಜಕೀಯ ಜ್ಞಾನ ಎಲ್ಲಾ ದಂಡಾಯ್ತು. ಇವರು ನೆಟ್ಟಗ ಕನ್ನಡದಾಗ ಮಾತಾಡಿದ್ರ ಹಿಂಗ ಕನ್ಫ್ಯೂಸ್ ಆಗ್ತಿರಲಿಲ್ಲ. ಸ್ಟೈಲಾಗಿ ಇಂಗ್ಲಿಷ್ನಾಗಾಡಿದ್ದಕ್ಕ ನಾವು ಯಾವ ಕಡಿಯವರಂತ ಆ ಮಾರಾಯಗ ಗೊತ್ತಾಗಲಿಲ್ಲ. ಇವರ ಕೈಗುಣ ಠುಸ್ಸ್ ಆಗಿದ್ದಕ್ಕ ಖುಷಿಯಾದ್ರೂ ಸಂಬಂಧ ತಪ್ಪಿದ್ದಕ್ಕ ಹಳಾಹಳಿಯಾಯ್ತು.

ಈ ಲಿಸ್ಟ್ ಯಾಕೋ ಬಗೆಹರಿಯಂಗಿಲ್ಲಗ್ಯದ. ಖೂನ ಗುರುತಿನಾಗೇ ಹುಡುಕೋಣಂತ ಗೊತ್ತಿದ್ದವರಿಗೆಲ್ಲ ಕನ್ಯಾ ಬೇಕಂತ ಡಂಗುರ ಸಾರಿದೆ. ಅವರೆಲ್ಲ ಭಾಳ ಕೋಶೀಶ್ ಮಾಡಿ ಒಂದೊಂದು ಕನ್ಯಾ ತಂದ್ರು. ಜಾತಕ ಪಾತಕ, ವಯಸ್ಸು, ಹೈಟು, ಕಲರ್ರು ಎಲ್ಲಾ ಹೊಂದಿಕ್ಯಾಗಿ ಹುಡುಗ್ರು ಒಪ್ಪಿಗಿತನಕ ಮುಂದುವರೆದಿದ್ದವು. ನಂಗಂತೂ ಸೀಟಿ ರಿಸಲ್ಟನಂಗ ಟೆನ್ಶನ್ನಾಗಿತ್ತು. ರಾಮಣ್ಣ 'ಅಪ್ಯಾಗ ಸ್ವಲ್ಪ ಛಂದ ಅಡಿಗಿ, ತಿಂಡಿ ಮಾಡಿ ಹಾಕು. ಅದೆಷ್ಟು ಸೊರಗ್ಯಾನ. ಹುಡುಗ ಚೌಳಿಕಾಯಿ ಬಾಳಕದಂಗಿದ್ದಾನ ಅಂದಳಂತ ಹುಡುಗಿ.' ಅಂದ. ಸಿಟ್ಟು ಬಂತು. 'ಹುಡುಗಿ ದಪ್ಪ ಇದ್ದಾಳ. ನಾವಲ್ಲೆ' ಅಂದ ಅಪ್ಯಾ. ನಾನೇ 'ಛಂದ ಗುಂಡಗುಂಡ ಇದ್ದಾಳ. ಇವತ್ನಾಳೆ ಜಂಕ್ ಫುಡ್ ಅಂತೀರಲ್ಲ... ಅದು ತಿಂದು ಹಂಗಾಗಿರ್ತಾಳ. ನಾಳೆ ನನ್ನ ಕೈಯಾಗ ಭಕ್ರಿ, ಮುದ್ದಿಪಲ್ಯ ತಿಂದು ಸೊರಗತಾಳ ಬಿಡು' ಅಂಥೇಳಿ ಗಪ್ಪ್ ಕೂಡಿಸಿದ್ದೆ.

ಆದ್ರ 'ಉಲ್ಟಾ ಚೋರ್ ಕೊತ್ವಾಲ್ ಕೋ ಡಾಂಟಾ' ಹಂಗಾಯ್ತು .

ದೇವರು ನನಗೂ ಭಾಳ ಸಹನಶಕ್ತಿ ಕೊಟ್ಟಾನಂತ ಖಾತ್ರಿಯಾಯ್ತು. ಶ್ಯಾಮಕ್ಕ ಹೇಳಿದ್ದು ಖಾತ್ರಿ ಆಗ್ಯದಂತ ಒಳಮನಸ್ಸು ಹೇಳುತ್ತಿತ್ತು. ಆಕಿನೇ ಖುದ್ದು ಮನೀಗಿ ಬಂದಾಗ ಹಿಗ್ಗಿ ಹೀರಿಕಾಯಾಗಿದ್ದೆ. ಅದುಯಿದು ಮಾತಾಗಿ ಅಸಲಿ ವಿಷಯಕ್ಕೀಳಿದಳು. ಹುಡುಗಿ ತಾಯಿ 'ಲಗ್ನಾದಮ್ಯಾಲ ಅಪ್ಪ ಅಮ್ಮಾ ಜೊತಿಗೇನೇ ಇರ್ತಾರೇನು ಅಂತ ಕೇಳಿದ್ರು.' ಅಂದಳು. 'ಹೂಂ... ಪಾಪ! ಸೊಸಿನೂ ಸಣ್ಣಾಕಿ. ಒಮ್ಮಿಂದೊಮ್ಮೆ ಸಂಸಾರ ನಿಭಾಯಿಸಬೇಕಲ್ಲ. ಮಗನ್ನ ಬಿಟ್ಟು ನಾವರ..ss ಹೋಗೋದೆಲ್ಲಿ...?' ಅಂದೆ. ಶ್ಯಾಮಕ್ಕ 'ಹುಚ್ಚಿ, ಈಗ ಅತ್ತಿ ಮಾವನ ಜೊತಿಗ್ಯಾರ್ ಇರ್ತಾರ. ಅತ್ತಿ ಮಾವಗ ಡಸ್ಟ್ ಬಿನ್ನು, ರಾಹುಕೇತು ಅಂತಾರ.' ಅಂದಳು. ನಂಗಂತೂ ಅಳು ಬಂತು. ಲೀಲಕ್ಕನೂ ನೆನಪಾದಳು. ಮೊದಲ್ನೇ ಮಗನದೇ ಈ ಪರಿಯದ. ಸಣ್ಣವನದು ಹೆಂಗೋ ಏನೋ. ಇವನೊಬ್ಬರ..ss ಹೆಣ್ಣಾಗಿದ್ರ... ಪೇಚಾಡಿದೆ.

ನಮ್ಮ ಕಾಲದಾಗ ವರ ಹುಡುಕದ್ರಾಗ ಹೆಣ್ ಹಡದವರ ಚಪ್ಲಿ ಸವದೋಗುತ್ತಿದ್ವು. ನಮ್ಮಪ್ಪ ಮೂರು ಹೆಣ್ಮಕ್ಕಳ ಲಗ್ನ ಮಾಡ್ಲಿಕ್ಕಿ ಎಷ್ಟೆಲ್ಲ ಹೈರಾಣಾದ. ಬಂದ ವರಗಳ ಮುಂದ ಕೂತು, ಕೇಳಿದ ಪ್ರಶ್ನಕ್ಕ ಉತ್ರಾ ಹೇಳಿ... ಹಾಡಂದ್ರ ಹಾಡಿ... ನಡಿಯಂದ್ರ ನಡದು...ನಾವೂ ಸಣ್ಣಾಗ್ತಿದ್ವಿ.

ಈಗ ಕಾಲಚಕ್ರ ಬದಲಾಗ್ಯದ ಖರೇ. ಕನ್ಯಾಗಳ ಡಿಮ್ಯಾಂಡು ಜೋರಾಗ್ಯದ. ಒಂದು ರೀತಿಲಿಂದ ಹುಡುಗಿಯರ ತಂದಿ ತಾಯಿಗೆ ನರಕ ತಪ್ಪಿತು. ಹಂಗಂತ ನನಗ ಎರಡು ಗಂಡು ಹುಟ್ಟಿದಾಗೇ